**(ಮಧ್ಯಂತರ ಅರ್ಜಿ ನಂ. 27 ಮತ್ತು 28 ರ ಮೇಲೆ ಆದ ಆದೇಶದ ಮೇರೆಗೆ ಇಂದು ದಿನಾಂಕ 06-07-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀಸವಾಲುಃ ವಾದಿ ಪರ ಶ್ರೀ.ಎಸ್ ಎಸ್ ಪಿ ವಕೀಲರಿಂದ**

ಈ ದಾವೆಯನ್ನು ವಾದಿ ತನ್ನ ಭಾಗ ಕೋರಿ ಹಾಕಿದ್ದಾನೆ. ಪ್ರತಿವಾದಿ ನಂ.36 ರಿಂದ 39 ರವರು ನನ್ನ ಮಕ್ಕಳು. ದಾವಾ ಆಸ್ತಿ ಸರ್ವೆ ನಂ.58/1, 58/2, 59/1, 59/2 ಇರುತ್ತವೆ. ಸದರಿ ದಾವಾ ಆಸ್ತಿಗಳು ಅಯ್ಯಪ್ಪ ದೇಸಾಯಿ ಅವರ ಮೂಲತಃ ಅವರಿಗೆ ಸೇರಿದ್ದು ಅಂದರೆ ಸಾಕ್ಷಿ ನಮ್ಮ ತಾಯಿ ಆಸ್ತಿಗಳನ್ನು ಖರೀದಿಸಿರುತ್ತಾರೆ. ದಾವಾ ಆಸ್ತಿ ಗಳನ್ನು ವಾದಿಯ ತಂದೆ ಹಸನಸಾಬ ಸಾಗುವಳಿ ಮಾಡುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ, ನಮ್ಮ ತಾಯಿ ಖರೀದಿಸಿದ್ದಾರೆ.

ಹಸನಸಾಬ ಸದರಿ ಆಸ್ತಿಗಳನ್ನು ತನಗೆ ಮಂಜೂರು ಮಾಡುವಂತೆ ಭೂ-ನ್ಯಾಯ ಮಂಡಳಿಗೆ ಅರ್ಜಿ ಕೊಟ್ಟಿದ್ದ ಎಂದರೆ ನನಗೆ ಗೊತ್ತಿಲ್ಲ. ಆ ಅರ್ಜಿ ವಿಚಾರಣೆಗೆ ಬಾಕಿ ಇದ್ದಾಗ ಹಸನಸಾಬ ಮೃತ ಪಟ್ಟಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಆತನ ಮರಣ ನಂತರ ಆತನ ಮಕ್ಕಳು ಆ ಅರ್ಜಿಯನ್ನು ಭೂ-ನ್ಯಾಯ ಮಂಡಳಿಯಲ್ಲಿ ಮುಂದುವರೆಸಿಕೊಂಡು ಬಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯನ್ನು ಭೂ-ನ್ಯಾಯ ಮಂಡಳಿಯಲ್ಲಿ ಚೌಕಾಶಿಯಾಗಿ 1984 ರಲ್ಲಿ ವಾದಿಯರಿಗೆ ಮತ್ತು ಸಹೋದರರಿಗೆ ಅತಿಭೋಗದಾರ ಹಕ್ಕನ್ನು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ವಾದಿಯರು ದಾವಾ ಆಸ್ತಿಯ ಮಾಲೀರು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಆತನಿಗೆ ಮತ್ತು ಆತನ ಸಹೋದರರಿಗೆ ಸಮಾನ ಹಕ್ಕು ಇದೆ ಎಂದರೆ ಸರಿಯಲ್ಲ. ನನ್ನ ತಾಯಿ ಬಾಡಿಗೆಗೆ ಕಾರನ್ನು ಕೊಡುತ್ತಿದ್ದರು.

ನನ್ನ ತಂದೆ 1974 ರಲ್ಲಿ ನಿವೃತ್ತಿಯಾಗಿರಹುದು ಸರಿಯಾಗಿ ನೆನಪಿಲ್ಲ. ಈ ದಾವಾ ಆಸ್ತಿಯನ್ನು ಬಿಟ್ಟು ನಮ್ಮ ತಾಯಿಗೆ ಹಿರಿಯರಿಂದ ಬೇರೆ ಜಮೀನು ಇತ್ತು. ದಾವಾ ಆಸ್ತಿಗೆ ವಾದಿಯರ ಸಹೋದರರ ಮಕ್ಕಳು ಹೆಸರು ಹಾಗೂ ಅಮೀನಸಾಬ ಅವರ ಮಕ್ಕಳು ಹೆಸರು ದಾವಾಆಸ್ತಿಯಲ್ಲಿ ಬಂದಿತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮಾರಾಟ ಮಾಡುವ ಕಾಲಕ್ಕೆ ಯಾರು ಯಾರು ಹಾಜರಿದ್ದರು ಎಂಬುದು ದಾಖಲೆ ನೋಡಿ ಹೇಳಬಹುದು. ಅದು ನೆನಪಿಲ್ಲ.

ಮಕ್ತುಮಸಾಬನಿಗೆ 4 ಜನ ಮಕ್ಕಳಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಖರೀದಿ ಮಾಡುವ ಕಾಲಕ್ಕೆ ಚೌಕಾಶಿ ಮಾಡಿದ್ದಾರೆ. ದಾವಾ ಆಸ್ತಿಯ ಕ್ರಯ ಪತ್ರಕ್ಕೆ ವಾದಿಯರು ಸಹಿ ಮಾಡಿಲ್ಲ ಎಂದರೆ ಅವರು ಆಸ್ತಿಗೆ ಸಂಬಂಧ ಇಲ್ಲ. ಸಂಬಂಧಪಟ್ಟವರು ಮಾತ್ರ ಸಹಿ ಮಾಡಿದ್ದಾರೆ. ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ನನ್ನ ತಾಯಿ ಪತ್ರಿಕಾ ಪ್ರಕಟಣೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಾಯಿ ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಚೌಕಾಶಿ ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ವಾದಿಯರಿಗೆ ಪ್ರತಿವಾದಿ ನಂ.1 ರಿಂದ 23 ರವರಿಗೆ ಹಕ್ಕು ಹಿತಾಸಕ್ತಿ ಇದೆ ಎಂದರೆ

ಸರಿಯಲ್ಲ. ನಿಡಿ.7 ರಿಂದ 9 ವಾದಿಯವರಿಗೆ ಬಂಧನಕಾರಕ ಎಂದರೆ ಸರಿಯಲ್ಲ. ನನ್ನ ತಾಯಿಗೆ ನಾನೇ ಒಬ್ಬಳೇ ಮಗಳು. ನಿಡಿ.7 ರಿಂದ 9 ಖೊಟ್ಟಿಯಾಗಿವೆ ಎಂದರೆ ಸರಿಯಲ್ಲ. ವಾದಿಯರ ಹಕ್ಕನ್ನು ಮುಳುಗಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕೆ.ಐ.ಡಿ.ಬಿ ಅವರು ಸ್ವಾಧೀನ ಪಡಿಸಿಕೊಳ್ಳುತ್ತಿದ್ದಾರೆ ಎಂದರೆ ಸರಿ ಸಾಕ್ಷಿ ಅದಕ್ಕೆ ನಿರ್ಭಂದನೆ ಪಡೆದುಕೊಡಿದ್ದೇವೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ಕೆಲ ಭಾಗ ರಾಷ್ಟ್ರೀಯ ಹೆದ್ದಾರಿಗೆ ಭೂ–ಸ್ವಾಧೀನವಾಗಿದ್ದು ಅದರ ಪರಿಹಾರ ನನ್ನ ತಾಯಿಯೇ ಪಡೆದಿದ್ದಾಳೆ. ಆ ಪರಿಹಾರವು ಸಹಿತ ವಾದಿಯರಿಗೆ ಬರಬೇಕೆಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.